ಸದನದಲ್ಲಿ ಉತ್ತರಿಸುವ
ಪ್ರಶ್ನೆಗಳ ಪಟ್ಟಿ
ಒಟ್ಟು ಪ್ರಶ್ನೆಗಳು – ೧೫

ಪಟ್ಟಿ–೧

# ಕರ್ನಾಟಕ ವಿಧಾನ ಪರಿಷತ್ತು

**ನೂರ ಮೂವತ್ತನೆಯ ಅಧಿವೇಶನ**

**ಮಂಗಳವಾರ, ದಿನಾಂಕ: ೧೧ನೇ ಮಾರ್ಚ್, ೨೧೧೬**

---

**ಸಮೂಹ – II**

೧. ಇಂಧನ ಸಚಿವರು
೨. ಪೌರಾಡಳಿತ, ಸ್ಥಳೀಯ ಸಂಸ್ಥೆಗಳು, ಸಾರ್ವಜನಿಕ ಉದ್ದಿಮೆಗಳು ಹಾಗೂ ಅಲ್ಪಸಂಖ್ಯಾತರ ಕಲ್ಯಾಣ ಮತ್ತು ವಕ್ಫ್ ಸಚಿವರು
೩. ಕೃಷಿ ಮಾರುಕಟ್ಟೆ ಮತ್ತು ತೋಟಗಾರಿಕೆ ಸಚಿವರು
೪. ಲೋಕೋಪಯೋಗಿ ಸಚಿವರು
೫. ಸಹಕಾರ ಮತ್ತು ಸಕ್ಕರೆ ಸಚಿವರು
೬. ಕೃಷಿ ರಾಜ್ಯ ಸಚಿವರು
೭. ಪಶುಸಂಗೋಪನೆ ಮತ್ತು ರೇಷ್ಮೆ ರಾಜ್ಯ ಸಚಿವರು

---

## ರೇಷ್ಮೆ ಬೆಳೆಗಾರರ ಸಮಸ್ಯೆಗಳು

**ಡಾ. ಜಯಮಾಲ ರಾಮಚಂದ್ರ (ನಾಮನಿರ್ದೇಶನ ಹೊಂದಿದವರು)** –

೧೧ (೮೫) ಪಶುಸಂಗೋಪನೆ ಮತ್ತು ರೇಷ್ಮೆ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಭಾರತದಲ್ಲಿ, ಚೈನಾ ಸಿಲ್ಕ್ ಕೊಳ್ಳುವಿಕೆಯ ಹೆಚ್ಚಳದಿಂದ, ಅಂತರರಾಷ್ಟ್ರೀಯ ಖ್ಯಾತಿಯ ಮೈಸೂರು ಸಿಲ್ಕ್ ಮಾರಾಟದ ವಹಿವಾಟು ಕನಿಷ್ಟ ರಾಷ್ಟ್ರೀಯ ಮಾರುಕಟ್ಟೆಯಲ್ಲಿ ಕೂಡ ದಿನೇ ದಿನೇ ಕ್ಷೀಣಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ರಾಜ್ಯದ ರೇಷ್ಮೆ ಬೆಳೆಗಾರರು ಮತ್ತು ಒಟ್ಟಾರೆ ವಹಿವಾಟಿನ ಸಮಸ್ಯೆಗಳಾವುವು;

(ಇ) ಚೈನಾ ಸಿಲ್ಕ್‌ಗೆ ಆಮದು ಸುಂಕವನ್ನು ಹೆಚ್ಚಿಸಬೇಕೆಂಬ ರೇಷ್ಮೆ ಬೆಳೆಗಾರರ ಮತ್ತು ಪಹಿವಾಟಿನ ಸಮಸ್ಯೆಗಳಿಗೆ ಸ್ಪಂದಿಸಬೇಕೆಂಬ ಕರ್ನಾಟಕ ಸರ್ಕಾರದ ಕೋರಿಕೆಯನ್ನು ಕೇಂದ್ರ ಸರ್ಕಾರ ಈಡೇರಿಸದಿರಲು ಕಾರಣವೇನು ;

(ಈ) ಮತ್ತೊಮ್ಮೆ, ಮೈಸೂರು ಸಿಲ್ಕ್‌ನ್ನ ಅಂತರರಾಷ್ಟ್ರೀಯ ಮಟ್ಟದಲ್ಲಿ ಖ್ಯಾತಿಗೊಳಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು ?

## ರಾಜ್ಯದ KPCL ಯಿಂದ ವಿದ್ಯುತ್ ಉತ್ಪಾದಿಸಲಾಗುತ್ತಿರುವ ಕುರಿತು

**ಶ್ರೀ ಎಸ್.ವ್ಹಿ. ಸಂಕನೂರ (ಪದವೀಧರರ ಕ್ಷೇತ್ರ) –**

೦೨ (೯೯) ಇಂಧನ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ರಾಜ್ಯದಲ್ಲಿ KPCL ಯಿಂದ ಒಟ್ಟು ಎಷ್ಟು ಪ್ರಮಾಣದ ವಿದ್ಯುತ್ ಉತ್ಪಾದಿಸಲಾಗುತ್ತದೆ; (ಸಂಪೂರ್ಣ ವಿವರ ನೀಡುವುದು)

(ಆ) ರಾಜ್ಯದಲ್ಲಿ ಒಟ್ಟು ವಿದ್ಯುತ್ತಿನ ಬೇಡಿಕೆ ಎಷ್ಟು ;

(ಇ) ವಿದ್ಯುತ್ ಅಭಾವದಿಂದ ರೈತರಿಗೆ, ಉದ್ದಿಮೆದಾರರಿಗೆ ಜನಸಾಮಾನ್ಯರಿಗೆ ತೊಂದರೆ ಆಗುತ್ತಿರುವುದು ನಿಜವೇ ;

(ಈ) ಹಾಗಿದ್ದಲ್ಲಿ, ವಿದ್ಯುತ್ ಕೊರತೆ ನಿವಾರಿಸಲು ಯಾವ ಯಾವ ಕ್ರಮ ಕೈಗೊಳ್ಳಲಾಗಿದೆ ; (ಸಂಪೂರ್ಣ ವಿವರ ನೀಡುವುದು)

(ಉ) ರಾಜ್ಯದಲ್ಲಿ ವಿದ್ಯುತ್ ಪೋಲಾಗುತ್ತಿರುವುದು ನಿಜವೇ ; ಯಾವ ಹಂತದಲ್ಲಿ ಮತ್ತು ಯಾವ ಯಾವ ರೀತಿ ಪೋಲಾಗುತ್ತಿದೆ ಎಂಬುದನ್ನು ಪತ್ತೆ ಹಚ್ಚಲಾಗಿದೆಯೇ ; (ವಿವರ ಒದಗಿಸುವುದು)

(ಊ) ಇದನ್ನು ತಡೆಗಟ್ಟಲು ಸರ್ಕಾರ ಕೈಗೊಂಡ ಕ್ರಮಗಳೇನು ?

## ರಾಷ್ಟ್ರೀಯ ಹೆದ್ದಾರಿ ಟೋಲ್ ಸಂಗ್ರಹದ ಬಗ್ಗೆ

**ಶ್ರೀ ಅಶ್ವತ್ ನಾರಾಯಣ (ವಿಧಾನಸಭೆಯಿಂದ ಚುನಾಯಿತರಾದವರು) –**

೦೩ (೯೬) ಲೋಕೋಪಯೋಗಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ರಾಷ್ಟ್ರೀಯ ಹೆದ್ದಾರಿ ೪೮ರಲ್ಲಿ (ಎನ್‌ಹೆಚ್–೪೮) ಬೆಂಗಳೂರು–ಹಾಸನ–ಮುಂಬೈ ರಸ್ತೆಗಳಲ್ಲಿ ಹೆದ್ದಾರಿಯಲ್ಲಿ ಟೋಲ್ ಸಂಗ್ರಹಿಸಲು ಇರುವ ಮಾನದಂಡವೇನು;

(ಆ) ಪ್ರತಿ ಎಷ್ಟು ಕಿ.ಮೀ.ಗೆ ಟೋಲ್ ಸಂಗ್ರಹ ಮಾಡಬೇಕು ; ಇದಕ್ಕೆ ಇರುವ ನಿಯಮಗಳೇನು ;

(ಇ) ಸುಂಕ ವಸೂಲಾತಿ ಸ್ಥಳದಲ್ಲಿ ತುರ್ತು ದಾರಿ ಎಂದು ಪ್ರತ್ಯೇಕವಾಗಿ ಬಿಡದೇ ಇರುವುದರಿಂದ ಆ್ಯಂಬುಲೆನ್ಸ್ ವಾಹನಗಳಿಗೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಈ) ವಾಹನದ ಮಾಲೀಕರು ರೋಡ್ ಟ್ಯಾಕ್ಸ್ ಪಾವತಿಸಿ ವಾಹನ ನೋಂದಣಿ ಮಾಡಿಸಿದ್ದರೂ ೫ ಕಿ.ಮೀ., ೧೦ ಕಿ.ಮೀ., ೧೪ ಕಿ.ಮೀ. ೨೦ ಕಿ.ಮೀ., ವ್ಯಾಪ್ತಿಯಲ್ಲಿ ಟೋಲ್ ಸಂಗ್ರಹ ಮಾಡುತ್ತಿರುವುದು ಎಷ್ಟರ ಮಟ್ಟಿ. ಸರಿ ;

(ಉ) ಸಂಗ್ರಹದ ಸ್ಥಳದಲ್ಲಿ ಯಾವುದೇ ಮಾರ್ಗಸೂಚಿ ಅಥವಾ ನಿರ್ದಿಷ್ಟ ಸೂಚನೆ ಇಲ್ಲದಿರುವುದರಿಂದ ಈ ಬಗ್ಗೆ ಪ್ರಶ್ನಿಸಿದರೆ ಅವಹೇಳನಕಾರಿ ಮಾತುಗಳನ್ನಾಡಿ ಗೂಂಡಾಗಳಂತೆ ವರ್ತಿಸುತ್ತಿದ್ದಾರೆ. ಇದರ ಬಗ್ಗೆ ಸರ್ಕಾರದ ನಿಲುವೇನು ?

## ಪಿ.ಎಲ್.ಡಿ. ಬ್ಯಾಂಕುಗಳ ಪುನಃಶ್ಚೇತನದ ಬಗ್ಗೆ

**ಶ್ರೀ ಆರ್. ಚೌಡರೆಡ್ಡಿ ತೂಪಲ್ಲಿ (ಪದವೀಧರರ ಕ್ಷೇತ್ರ) –**

೧೪ (೧೫೨) ಸಹಕಾರ ಮತ್ತು ಸಕ್ಕರೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ರಾಜ್ಯದಲ್ಲಿರುವ ಪಿ.ಎಲ್.ಡಿ. ಬ್ಯಾಂಕುಗಳು ಎಷ್ಟು ; ಇವುಗಳಲ್ಲಿ ಲಾಭದಲ್ಲಿರುವ ಹಾಗೂ ನಷ್ಟದಲ್ಲಿರುವ ಬ್ಯಾಂಕುಗಳು ಯಾವುವು ; (ಜಿಲ್ಲಾವಾರು ಮಾಹಿತಿ ನೀಡುವುದು)

(ಆ) ಸದರಿ ಪಿ.ಎಲ್.ಡಿ. ಬ್ಯಾಂಕುಗಳ ಅಭಿವೃದ್ಧಿಗೆ ಸರ್ಕಾರ ಹಾಕಿಕೊಂಡ ಯೋಜನೆಗಳಾವುವು ; (ವಿವರವಾದ ಮಾಹಿತಿ ನೀಡುವುದು)

(ಇ) ನಬಾರ್ಡ್ ಬ್ಯಾಂಕ್ ಮತ್ತು ಪಿ.ಎಲ್.ಡಿ. ಬ್ಯಾಂಕುಗಳ ಮಧ್ಯೆ ಕಾಸಕಾರ್ಡ (KSCAR⁻) ಬ್ಯಾಂಕನ್ನು ಸ್ಥಾಪಿಸುವ ಅವಶ್ಯಕತೆ ಇದೆಯೇ ;

(ಈ) ಕಾಸಕಾರ್ಡ (KSCARD) ಬ್ಯಾಂಕಿನ ಬದಲಾಗಿ ನಬಾರ್ಡ್‌ನಿಂದ ನೇರವಾಗಿ ಪಿ.ಎಲ್.ಡಿ. ಬ್ಯಾಂಕುಗಳಿಗೆ ಹಣಕಾಸು ಸೌಲಭ್ಯ ಒದಗಿಸಿದ್ದರೆ ಪಿ.ಎಲ್.ಡಿ. ಬ್ಯಾಂಕುಗಳು ಮತ್ತು ರೈತರಿಗೆ ತುಂಬಾ ಅನುಕೂಲವಾಗುತ್ತಿದ್ದುದ್ದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಉ) ಸಹಕಾರಿ ಅಧಿನಿಯಮಕ್ಕೆ ತಿದ್ದುಪಡಿ ತಂದು ಪಿ.ಎಲ್.ಡಿ. ಬ್ಯಾಂಕುಗಳ ಪುನಃಶ್ಚೇತನಕ್ಕೆ ಸರ್ಕಾರದಿಂದ ಆದೇಶ ಹೊರಡಿಸಲಾಗುವುದು ಯಾವಾಗ?

## ರಾಜ್ಯದ ರಾಷ್ಟ್ರೀಯ ಹೆದ್ದಾರಿ ಚತುಷ್ಪಥ ರಸ್ತೆಯಲ್ಲಿನ ಮೀಡಿಯನ್‌ಗೆ ಕಳಪೆ ಮಟ್ಟದ ಮಣ್ಣನ್ನು ತುಂಬಿಸುತ್ತಿರುವ ಬಗ್ಗೆ

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್ (ಶಿಕ್ಷಕರ ಕ್ಷೇತ್ರ) –**

೦೫ (೨೬) ಲೋಕೋಪಯೋಗಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ರಾಜ್ಯದ ರಾಷ್ಟ್ರೀಯ ಹೆದ್ದಾರಿ ಚತುಷ್ಪಥ ಕಾಮಗಾರಿ ವೇಳೆ ರಸ್ತೆಯ ನಡುಭಾಗದಲ್ಲಿರುವ ಮೀಡಿಯನ್‌ಗೆ ಮಣ್ಣು ತುಂಬಿಸುವಾಗ ಕಲ್ಲುಗಳು, ಜೇಡಿ ಮಣ್ಣು ಮುಂತಾದ ಕಳಪೆ ಮಣ್ಣನ್ನು ತುಂಬಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಈ ಕಳಪೆ ಮಟ್ಟದ ಕಾಮಗಾರಿಯಿಂದ ರಸ್ತೆಯ ನಡುಭಾಗದಲ್ಲಿ ಗಿಡ ಮರಗಳನ್ನು ನೆಟ್ಟು ಪೋಷಿಸಿ ಬೆಳೆಸುವುದಕ್ಕೆ ಅನಾನುಕೂಲವಾಗುತ್ತಿರುವುದು ಸರ್ಕಾರದ ಗಮನದಲ್ಲಿದೆಯೇ ;

(ಇ) ಟೆಂಡರ್ ನಿಯಮದಂತೆ ಮಣ್ಣನ್ನು ತುಂಬಿಸಲು ಇರುವ ಮಾನದಂಡಗಳೇನು; ಅನುಷ್ಠಾನಗೊಳಿಸುವಲ್ಲಿ ವಿಫಲವಾಗುತ್ತಿರಲು ಕಾರಣಗಳೇನು ;

(ಈ) ಉತ್ತಮ ಗುಣಮಟ್ಟದ ಮಣ್ಣು ತುಂಬಿಸುವ ಮೂಲಕ ಈ ರೀತಿಯಾಗದಂತೆ ತಡೆಗಟ್ಟಲು ಸರ್ಕಾರ ಯಾವ ಕ್ರಮಕೈಗೊಳ್ಳುವುದೇ ?

## ಐ.ಟಿ.ಐ. ನೌಕರರ ಗೃಹ ನಿರ್ಮಾಣ ಸಹಕಾರ ಸಂಘದಲ್ಲಿನ ಅವ್ಯವಹಾರದ ಬಗ್ಗೆ

**ಶ್ರೀಮತಿ ಮೋಟಮ್ಮ (ವಿಧಾನಸಭೆಯಿಂದ ಚುನಾಯಿತರಾದವರು) –**

೦೬ (೧೩೦) ಸಹಕಾರ ಮತ್ತು ಸಕ್ಕರೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಐ.ಟಿ.ಐ. ನೌಕರರ ಗೃಹ ನಿರ್ಮಾಣ ಸಹಕಾರ ಸಂಘದ ಮಾಜಿ ಕಾರ್ಯದರ್ಶಿಯವರು ಚುನಾವಣಾ ವೆಚ್ಚದಲ್ಲಿ ಅವ್ಯವಹಾರ ನಡೆಸಿರುವ ಬಗ್ಗೆ ಹಾಗೂ ಮತ್ತೊಬ್ಬರು ಸಂಘದ ನಿವೇಶನಗಳನ್ನು ಇಲಾಖೆಯ ನಿರ್ಬಂಧಿತ ಅವಧಿಯಲ್ಲಿ ಕಾನೂನು ಬಾಹಿರವಾಗಿ ಮಾರಾಟ ಮಾಡಿದ್ದು ಸಂಘಕ್ಕೆ

ಕೋಟ್ಯಾಂತರ ರೂಪಾಯಿ ನಷ್ಟ ಉಂಟು ಮಾಡಿರುವ ಬಗ್ಗೆ ಆಡಳಿತ ಮಂಡಳಿಯವರು ಹಾಗೂ ಇಲಾಖೆಯವರು ತೆಗೆದುಕೊಂಡಿರುವ ಕ್ರಮಗಳೇನು; (ದೃಢೀಕೃತ ದಾಖಲೆ ಸಹಿತ ಮಾಹಿತಿ ನೀಡುವುದು)

(ಆ) ಸಂಘದ ಹಲವಾರು ಅವ್ಯವಹಾರಗಳ ಸಂಬಂಧ ಇಲಾಖೆಯವರು ಎಷ್ಟು ಬಾರಿ ಸಮಗ್ರ ತನಿಖೆ ನಡೆಸಲಾಗಿದೆ ; ಆಡಳಿತ ಮಂಡಳಿ ರದ್ದತಿಗೆ ತೆಗೆದುಕೊಂಡಿರುವ ಕ್ರಮಗಳೇನು ; ಹಾಲಿ ಕಾರ್ಯದರ್ಶಿ ವಿರುದ್ಧ ಕ್ರಿಮಿನಲ್ ಹಾಗೂ ವಸೂಲಾತಿ ದಾವಾ ಪ್ರಕರಣಗಳು ದಾಖಲಾಗಿದೆಯೇ ;

(ಇ) ಸಂಘದ ಕಾರ್ಯದರ್ಶಿಗಳು ದಿನಾಂಕ: ೦೧.೦೪.೨೦೧೪ ರಿಂದ ಇಲ್ಲಿಯವರೆಗೆ ಸಂಘದ ನಿವೇಶನಗಳನ್ನು ಹಂಚಿಕೆ ಹಾಗೂ ನೋಂದಣಿ ಮಾಡಿರುವ ಎಲ್ಲಾ ನಿವೇಶನಗಳ ಸಂಖ್ಯೆ ಎಷ್ಟು ; (ಮಾಹಿತಿ ನೀಡುವುದು) ೩೦(ಬಿ) ನಿರ್ದೇಶನ ಉಲ್ಲಂಘಿಸಿರುವ ಬಗ್ಗೆ ಇಲಾಖೆಯವರು ತೆಗೆದುಕೊಂಡಿರುವ ಕಾನೂನಿನ ಕ್ರಮಗಳೇನು ? (ನೊಂದಾಯಿತ ನಿವೇಶನಗಳ ದೃಢೀಕೃತ ದಾಖಲೆ ಸಹಿತ ಸಂಪೂರ್ಣ ಮಾಹಿತಿ ನೀಡುವುದು)

**ರಾಜ್ಯ ಹೆದ್ದಾರಿಗಳನ್ನು ರಾಷ್ಟ್ರೀಯ ಹೆದ್ದಾರಿಗಳನ್ನಾಗಿ ಪರಿವರ್ತಿಸುವ ಬಗ್ಗೆ**

**ಶ್ರೀ ಎಂ.ಡಿ. ಲಕ್ಷ್ಮೀನಾರಾಯಣ (ಅಣ್ಣಯ್ಯ) (ನಾಮನಿರ್ದೇಶನ ಹೊಂದಿದವರು)** –

೦೭ (೧೪೪) ಲೋಕೋಪಯೋಗಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ರಾಜ್ಯ ಹೆದ್ದಾರಿಗಳನ್ನು ರಾಷ್ಟ್ರೀಯ ಹೆದ್ದಾರಿಗಳನ್ನಾಗಿ ಪರಿವರ್ತಿಸಲು ಕೈಗೊಂಡಿರುವ ಕ್ರಮಗಳೇನು ;

(ಆ) ಕಳೆದ ಮೂರು ವರ್ಷಗಳಲ್ಲಿ ಯಾವ್ಯಾವ ರಸ್ತೆಗಳಿಗೆ ಕೇಂದ್ರದಿಂದ ಅನುಮತಿ ದೊರಕಿದೆ; (ವಿವರ ನೀಡುವುದು)

(ಇ) ಆ ಪೈಕಿ ಯಾವ ಯಾವ ರಸ್ತೆಗಳ ಕಾರ್ಯ ಪ್ರಾರಂಭಗೊಂಡಿದೆ ; ಪೂರ್ಣಗೊಳ್ಳುವುದು ಯಾವಾಗ ;

(ಈ) ಈ ವರ್ಷದಲ್ಲಿ ಕೇಂದ್ರದಲ್ಲಿ ಸಿಗಬಹುದಾದ ಅನುಮತಿ ಹಾಗೂ ಅನುದಾನದ ಬಗ್ಗೆ ಮಾಹಿತಿ ನೀಡುವುದು ?

## ಅನಾವೃಷ್ಟಿಯಿಂದ ಆದ ಬೆಳೆಹಾನಿಗೆ ಪರಿಹಾರ ನೀಡುವ ಬಗ್ಗೆ

**ಶ್ರೀ ವಿಜಯಸಿಂಗ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)** –

೦೮ (೧೪೯) ಕೃಷಿ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೇ –

(ಅ) ಕಳೆದ ೨ ವರ್ಷಗಳಿಂದ ಬೀದರ್ ಜಿಲ್ಲೆಯಲ್ಲಿ ಮಳೆಬಾರದೇ ಬೆಳೆ ಹಾನಿಯಿಂದ ರೈತರು ಆರ್ಥಿಕ ಸಂಕಷ್ಟದಲ್ಲಿ ಸಿಲುಕಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದರೆ, ಇದಕ್ಕೆ ಸರ್ಕಾರ ಕೈಗೊಂಡ ಕ್ರಮಗಳೇನು ;

(ಆ) ಬೀದರ್ ಜಿಲ್ಲೆಯಲ್ಲಿ ಎಷ್ಟು ರೈತರು ಬೆಳೆ ಹಾನಿಯಿಂದ ಆತ್ಮಹತ್ಯೆಗೆ ಒಳಗಾಗಿದ್ದಾರೆ ; (ವಿವರ ನೀಡುವುದು)

(ಇ) ಆತ್ಮಹತ್ಯೆ ಮಾಡಿಕೊಂಡ ರೈತರ ಕುಟುಂಬಗಳಿಗೆ ಸರ್ಕಾರದಿಂದ ಪರಿಹಾರ ನೀಡಲಾಗಿದೆಯೇ ; ನೀಡಿದ್ದರೆ, ಪರಿಹಾರದ ಮೊತ್ತ ಮತ್ತು ಕುಟುಂಬವಾರು ವಿವರ ನೀಡುವುದು ?

## ೨೦೧೪–೧೫ ಮತ್ತು ೨೦೧೫–೧೬ರಲ್ಲಿ ಸೌರಶಕ್ತಿ ಮೇಲ್ಚಾವಣಿ ಘಟಕಗಳನ್ನು ಸ್ಥಾಪಿಸಿದ ಬಗ್ಗೆ

**ಶ್ರೀ ಐವಾನ್ ಡಿ'ಸೋಜಾ (ನಾಮನಿರ್ದೇಶನ ಹೊಂದಿದವರು)** –

೦೯ (೧೧೪) ಇಂಧನ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೇ –

(ಅ) ೨೦೧೪–೧೫ ಮತ್ತು ೨೦೧೫–೧೬ರಲ್ಲಿ ರಾಜ್ಯದಲ್ಲಿ ಎಷ್ಟು ಸೌರಶಕ್ತಿ ಮೇಲ್ಚಾವಣಿ ಘಟಕಗಳನ್ನು ಸ್ಥಾಪಿಸಲಾಗಿದೆ. ಸದರಿ ಘಟಕಗಳಿಂದ ಎಷ್ಟು ಯೂನಿಟ್ ವಿದ್ಯುತ್ತನ್ನು ಉತ್ಪಾದಿಸಲಾಗಿದೆ ; ಯಾವ ದರದಲ್ಲಿ ವಿದ್ಯುತ್ತನ್ನು ಖರೀದಿಸಲಾಗಿದೆ; (ಜಿಲ್ಲಾವಾರು ವಿವರ ನೀಡುವುದು) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಅಳವಡಿಸಿದ ಒಟ್ಟು ಘಟಕಗಳು ಎಷ್ಟು ;

(ಆ) ಸೌರಶಕ್ತಿ ಮೇಲ್ಚಾವಣಿ ಘಟಕಗಳಿಗೆ ನೀಡುತ್ತಿರುವ ಸಬ್ಸಿಡಿ ಎಷ್ಟು ? ೨೦೧೪–೧೫ ಮತ್ತು ೨೦೧೫–೧೬ನೇ ಸಾಲಿನಲ್ಲಿ ಪಾವತಿಸಿದ ಸಬ್ಸಿಡಿ ಮೊತ್ತ ಎಷ್ಟು;

(ಇ) ಸೌರಶಕ್ತಿಯನ್ನು ಪ್ರೋತ್ಸಾಹಿಸಲು ಬ್ಯಾಂಕುಗಳಿಂದ ಸಾಲವನ್ನು ನೀಡಲು ಇಲಾಖೆ ಕ್ರಮ ಕೈಗೊಂಡಿದೆಯೇ ; ಕೈಗೊಂಡಿದ್ದರೆ, ಯಾವ ದರದಲ್ಲಿ ಸಾಲವನ್ನು ಒದಗಿಸಲಾಗಿದೆ ; (ವಿವರ ನೀಡುವುದು)

(ಈ) ಸೌರಶಕ್ತಿ ಘಟಕಗಳನ್ನು ವಿಧಾನಸೌಧ ಮತ್ತು ವಿಕಾಸಸೌಧದ ಮೇಲ್ಛಾವಣಿಯಲ್ಲಿ ಅಳವಡಿಸಲು ಇಲಾಖೆ ಕ್ರಮ ಕೈಗೊಂಡಿದೆಯೇ ; ಕೈಗೊಂಡಿದ್ದರೆ, ಯಾವ ಹಂತದಲ್ಲಿದೆ ; (ವಿವರ ಒದಗಿಸುವುದು)

(ಉ) ಸರ್ಕಾರಿ ಇಲಾಖೆಯ ಕಛೇರಿಯಲ್ಲಿ ಕಡ್ಡಯಗೊಳಿಸಲು ಇಲಾಖೆ ಸೂಚಿಸಿದೆಯೇ; ವಿದ್ಯುಚ್ಛಕ್ತಿ ಇಲಾಖೆಯ ಕಛೇರಿಗಳಲ್ಲೂ ಅಳವಡಿಸಲಾಗಿದೆಯೇ? (ವಿವರ ಒದಗಿಸುವುದು)

## ಕಳೆದ ೩ ವರ್ಷದಲ್ಲಿ ರಾಜ್ಯದಲ್ಲಿ ಕೃಷಿ ಕ್ಷೇತ್ರದ ಉತ್ಪಾದನೆ ಕುರಿತು

**ಶ್ರೀ ಅರುಣ ಶಹಾಪುರ (ಶಿಕ್ಷಕರ ಕ್ಷೇತ್ರ) –**

೧೦ (೯೧) ಕೃಷಿ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಕಳೆದ ೦೩ ವರ್ಷದಲ್ಲಿ ರಾಜ್ಯದಲ್ಲಿ ಕೃಷಿ ಕ್ಷೇತ್ರದ ಉತ್ಪಾದನೆ ಎಷ್ಟು ; (ವಿವರ ನೀಡುವುದು)

(ಆ) ಕೃಷಿ ಕ್ಷೇತ್ರದಿಂದ ಯುವಕರು ವಿಮುಖರಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಇ) ಕೃಷಿ ಕ್ಷೇತ್ರದತ್ತ ಯುವಕರು ಆಸಕ್ತಿ ಬೆಳೆಸಲು ಹಾಗೂ ಯುವಕರ ತೊಡಗಿಸುವಿಕೆಗೆ ಸರ್ಕಾರ ರೂಪಿಸಿರುವ ಯೋಜನೆಗಳು ಯಾವುವು ?

## ೨೦೧೫–೧೬ನೇ ಸಾಲಿನಲ್ಲಿ ಅಲ್ಪಸಂಖ್ಯಾತರ ಕಲ್ಯಾಣ ನಿಧಿಯ ಅನುದಾನದ ಕುರಿತು

**ಶ್ರೀ ಕವಟಗಿಮಠ ಮಹಂತೇಶ ಮಲ್ಲಿಕಾರ್ಜುನ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೧೧ (೧೨೫) ಪೌರಾಡಳಿತ, ಸ್ಥಳೀಯ ಸಂಸ್ಥೆಗಳು, ಸಾರ್ವಜನಿಕ ಉದ್ದಿಮೆಗಳು ಹಾಗೂ ಅಲ್ಪಸಂಖ್ಯಾತರ ಕಲ್ಯಾಣ ಮತ್ತು ವಕ್ಫ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಕಳೆದ ೨೦೧೫–೧೬ನೇ ಸಾಲಿನಲ್ಲಿ ಅಲ್ಪಸಂಖ್ಯಾತರ ಕಲ್ಯಾಣ ನಿಧಿಯಲ್ಲಿ ಮೀಸಲಿಟ್ಟ ಅನುದಾನವನ್ನು ಸದ್ಬಳಕೆ ಮಾಡದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಹಾಗಿದ್ದಲ್ಲಿ, ಬಳಕೆಯಾದ ಅನುದಾನದಲ್ಲಿ ಕೈಗೊಂಡ ಕೆಲಸಕಾರ್ಯಗಳು ಯಾವುವು ; ಯಾವ ಯಾವ ಅಭಿವೃದ್ಧಿ ಕಾರ್ಯಗಳಿಗೆ ಎಷ್ಟು ಹಣವನ್ನು ವಿನಿಯೋಗಿಸಲಾಯಿತು ;

(ಆ) ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯಡಿಯಲ್ಲಿ ಬರುವ ಜಾತಿಗಳು ಎಷ್ಟು; ಯಾವ ಯಾವ ವರ್ಗಕ್ಕೆ ಎಷ್ಟು ಅನುದಾನ ನೀಡಲಾಗಿದೆ ; ಯಾವ ಯಾವ ವರ್ಗಗಳಿಗೆ ಯಾವ ಯಾವ ಯೋಜನೆಗಳನ್ನು ರೂಪಿಸಲಾಗಿದೆ ; (ಸಂಪೂರ್ಣ ಮಾಹಿತಿ ನೀಡುವುದು)

(ಇ) ರಾಜ್ಯದ ಎಷ್ಟು ಜನರಿಗೆ ಶಾದಿಭಾಗ್ಯ ಯೋಜನೆಯಡಿ ಅನುಕೂಲ ಮಾಡಿಕೊಡಲಾಗಿದೆ ; ೨೦೧೪–೧೫ ಮತ್ತು ೨೦೧೫–೧೬ನೇ ಸಾಲಿನಲ್ಲಿ ಬೆಳಗಾವಿ ಜಿಲ್ಲೆಯಲ್ಲಿ ಒಟ್ಟು ಎಷ್ಟು ಜನರಿಗೆ ಈ ಯೋಜನೆಯಡಿ ಅವಕಾಶ ಕಲ್ಪಿಸಲಾಗಿದೆ ; (ಮಾಹಿತಿ ನೀಡುವುದು)

(ಈ) ಶಾದಿಮಹಲ್ ಯೋಜನೆಯಡಿಯಲ್ಲಿ ಬೆಳಗಾವಿ ಜಿಲ್ಲೆಯಲ್ಲಿ ೨೦೧೪–೧೫ ಮತ್ತು ೨೦೧೫–೧೬ನೇ ಸಾಲಿನಲ್ಲಿ ಎಷ್ಟು ಶಾದಿಮಹಲ್‌ಗಳನ್ನು ಯಾವ ಯಾವ ಸಮುದಾಯಗಳಿಗೆ ನೀಡಲಾಗಿದೆ ; (ಸಂಪೂರ್ಣ ವಿವರ ನೀಡುವುದು)

(ಉ) ಇನ್ನೂ ಸರ್ಕಾರದ ಖಜಾನೆಯಲ್ಲಿ ಬಾಕಿ ಇರುವ ಅನುದಾನವನ್ನು ಯಾವ ಕಾಲಮಿತಿಯಲ್ಲಿ ಸದ್ಬಳಕೆ ಮಾಡಲಾಗುತ್ತದೆ ?

## ರಾಜ್ಯದಲ್ಲಿ ಎಲ್.ಇ.ಡಿ. ಬಲ್ಬ್‌ಗಳನ್ನು ವಿತರಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳ ಬಗ್ಗೆ

**ಶ್ರೀ ಟಿ.ಎ. ಶರವಣ (ವಿಧಾನಸಭೆಯಿಂದ ಚುನಾಯಿತರಾದವರು)** –

೧೨ (೩) ಇಂಧನ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ರಾಜ್ಯದಲ್ಲಿ ಎಲ್.ಇ.ಡಿ. ಬಲ್ಬ್‌ಗಳನ್ನು ವಿತರಿಸಲು ಸರ್ಕಾರವು ಕೈಗೊಂಡಿರುವ ಕ್ರಮಗಳೇನು ; (ಸಂಪೂರ್ಣ ಮಾಹಿತಿ ನೀಡುವುದು)

(ಆ) ಎಲ್.ಇ.ಡಿ. ಬಲ್ಬ್‌ಗಳನ್ನು ರಾಜ್ಯಾದ್ಯಂತ ವಿತರಿಸಿದರೆ ಉಳಿತಾಯವಾಗುವ ಇಂಧನದ ಪ್ರಮಾಣವೆಷ್ಟು ಹಾಗೂ ಸರ್ಕಾರದ ಬೊಕ್ಕಸಕ್ಕೆ ಉಳಿತಾಯವಾಗುವ ಹಣವೆಷ್ಟು ; (ಸಂಪೂರ್ಣ ಮಾಹಿತಿ ನೀಡುವುದು)

(ಇ) ಬಿ.ಪಿ.ಎಲ್. ಕಾರ್ಡ್ ಹೊಂದಿರುವವರಿಗೆ ಉಚಿತವಾಗಿ ಎಲ್.ಇ.ಡಿ. ಬಲ್ಬ್‌ಗಳನ್ನು ವಿತರಿಸಲಾಗುವುದೆ ;

(ಈ) ಹಾಗಿಲ್ಲದಿದ್ದಲ್ಲಿ, ಕಾರಣಗಳೇನು ? (ಮಾಹಿತಿ ನೀಡುವುದು)

## 'ಅಮೃತ' ಯೋಜನೆಯ ಕುರಿತು

**ಶ್ರೀ ಅಮರನಾಥ ಪಾಟೀಲ್ (ಪದವೀಧರರ ಕ್ಷೇತ್ರ) –**

೧೩ (೧೪೮) ಪೌರಾಡಳಿತ, ಸ್ಥಳೀಯ ಸಂಸ್ಥೆಗಳು, ಸಾರ್ವಜನಿಕ ಉದ್ದಿಮೆಗಳು ಹಾಗೂ ಅಲ್ಪಸಂಖ್ಯಾತರ ಕಲ್ಯಾಣ ಮತ್ತು ವಕ್ಫ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) 'ಅಮೃತ' ಯೋಜನೆಯಡಿಯಲ್ಲಿ ಬೀದರ್, ಕಲಬುರಗಿ, ಯಾದಗಿರಿ, ರಾಯಚೂರು, ಕೊಪ್ಪಳ, ಬಳ್ಳಾರಿ ಮತ್ತು ದಾವಣಗೆರೆ ಜಿಲ್ಲೆಗಳಲ್ಲಿ ಆಯ್ಕೆಯಾದ ನಗರಗಳಾವುವು ; (ಸಂಪೂರ್ಣ ವಿವರ ನೀಡುವುದು)

(ಆ) ಸದರಿ 'ಅಮೃತ' ಯೋಜನೆಯಡಿಯಲ್ಲಿ ಯಾವ ಯಾವ ವಲಯಗಳನ್ನು (SECTOR) ಆಯ್ಕೆ ಮಾಡಲಾಗಿದೆ ; (ನಗರವಾರು, ವಲಯವಾರು ವಿವರ ನೀಡುವುದು)

(ಇ) ಸದರಿ ಅಮೃತ ಯೋಜನೆಗೆ ರಾಜ್ಯ ಸರ್ಕಾರದಿಂದ ಅನುದಾನ ಒದಗಿಸಲಾಗಿದೆಯೇ ; (ನಗರವಾರು ವಲಯವಾರು ವಿವರ ನೀಡುವುದು)

(ಈ) ಸದರಿ ಯೋಜನೆಗೆ ಕೇಂದ್ರ ಸರ್ಕಾರದ ನಗರಾಭಿವೃದ್ಧಿ ಇಲಾಖೆಯಿಂದ ಮಂಜೂರಾದ ಅನುದಾನವೆಷ್ಟು ? (ನಗರವಾರು, ವಲಯವಾರು ಸಂಪೂರ್ಣ ವಿವರ ನೀಡುವುದು)

## ನೀರು ಸರಬರಾಜಿಗೋಸ್ಕರ ಸಂಸ್ಥೆಗಳು ಮಾಡಿದ ವೆಚ್ಚ

**ಶ್ರೀ ರಘುನಾಥ ರಾವ್ ಮಲ್ಕಾಪೂರೆ (ವಿಧಾನಸಭೆಯಿಂದ ಚುನಾಯಿತರಾದವರು)–**

೧೪ (೧೪೧) ಪೌರಾಡಳಿತ, ಸ್ಥಳೀಯ ಸಂಸ್ಥೆಗಳು, ಸಾರ್ವಜನಿಕ ಉದ್ದಿಮೆಗಳು ಹಾಗೂ ಅಲ್ಪಸಂಖ್ಯಾತರ ಕಲ್ಯಾಣ ಮತ್ತು ವಕ್ಫ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಬೀದರ್ ಜಿಲ್ಲೆಯ ನಗರ ಸ್ಥಳೀಯ ಸಂಸ್ಥೆಗಳಲ್ಲಿ ನೀರು ಸರಬರಾಜಿಗಾಗಿ ಕಳೆದ ೫ ವರ್ಷಗಳಿಂದ ಮಾಡಲಾದ ವೆಚ್ಚ ಎಷ್ಟು ; (ಸ್ಥಳೀಯ ಸಂಸ್ಥೆಗಳವಾರು ವರ್ಷವಾರು ಸಂಪೂರ್ಣ ವಿವರ ಒದಗಿಸುವುದು)

(ಆ) ನೀರು ಸರಬರಾಜಿಗೋಸ್ಕರ ಹೊಸದಾಗಿ ವಿವಿಧ ಸಾಮಗ್ರಿಗಳನ್ನು ಅಳವಡಿಸಿದ್ದಲ್ಲಿ ಅವುಗಳು ಯಾವುವು (ಕಂಪನಿಯ ಯಂತ್ರ/ಬಿಡಿ ಭಾಗಗಳಿಗೆ ತಗುಲಿದ ವೆಚ್ಚ ಅಳವಡಿಸಿದ ಸ್ಥಳ ಹಾಗೆ ಗುತ್ತಿಗೆದಾರರ ಮಾಹಿತಿ ನೀಡುವುದು)

(ಇ) ಹಾಗಿದ್ದಲ್ಲಿ, ನೀರು ಸರಬರಾಜಿಗೋಸ್ಕರ ಹೊಸದಾದ ಸಾಮಗ್ರಿಗಳು ಅಳವಡಿಸಿದ್ದು ನಂತರದ (ಸ್ಕ್ರ್ಯಾಪ್ ಮೆಟೀರಿಯಲ್) ಕೆಟ್ಟು ಹೋದ ಹಳೆಯ ಸಾಮಗ್ರಿಗಳ ದಾಸ್ತಾನು ಹಾಗೂ ವಿಲೇಗೊಳಿಸಿರುವ ಆಯಾ ಸಾಮಗ್ರಿಗಳವಾರು ಸಂಸ್ಥೆಗಳವಾರು ಲಾಭ/ನಷ್ಟದ ವಿವರ ನೀಡುವುದು)

(ಈ) ಸ್ಥಳೀಯ ಸಂಸ್ಥೆಗಳಲ್ಲಿದ್ದ ವಿವಿಧ ರೀತಿಯ (ಸ್ಕ್ರ್ಯಾಪ್ ಮೆಟೀರಿಯಲ್) ಮಾರಾಟ ಮಾಡಲು ಸರ್ಕಾರದ ಅನುಮತಿ ಪಡೆಯಲಾಗಿದೆಯೇ ಹಾಗೂ ಅನುಮತಿ ಪಡೆಯದೇ ಮಾರಾಟ ಮಾಡಿರುವ ಅಧಿಕಾರಿ/ಸಿಬ್ಬಂದಿಗಳ ವಿರುದ್ಧ ಯಾವ ಕ್ರಮ ಜರುಗಿಸಲಾಗಿರುತ್ತದೆ ; (ಸಂಸ್ಥೆಗಳವಾರು, ವರ್ಷವಾರು ಸಂಪೂರ್ಣ ಮಾಹಿತಿ ಒದಗಿಸುವುದು)

## ರೈತಾಪಿ ವರ್ಗದವರ ಬಗ್ಗೆ ಕಾಳಜಿ

**ಶ್ರೀಮತಿ ತಾರಾ ಅನೂರಾಧ** (ನಾಮನಿರ್ದೇಶನ ಹೊಂದಿದವರು) –

೧೫ (೧೧೨) ಕೃಷಿ ರಾಜ್ಯ ಸಚಿವ ೮ ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ರೈತನ ವ್ಯವಸಾಯ ವೃತ್ತಿಗೆ ಸರ್ಕಾರ ಹಲವಾರು ಯೋಜನೆ, ಅನುಕೂಲತೆಗಳನ್ನು ಕಲ್ಪಿಸಿದೆ. ರೈತನು ಸಾಲಭಾದೆಗೊಳಗಾಗಿ ಸತ್ತ ನಂತರ ಪರಿಹಾರ ನೀಡುವುದು ಒಂದು ಭಾಗವಾದರೆ, ರೈತನ ಜೀವಿತಾವಧಿಯಲ್ಲೇ ಅವನ ಕುಟುಂಬದ ಆರ್ಥಿಕ ಸ್ಥಿತಿ ಸುಧಾರಿಸಲು ಅಗತ್ಯ ಜೀವನ ಭದ್ರತೆ ಒದಗಿಸುವ ನಿಟ್ಟಿನಲ್ಲಿ ಸರ್ಕಾರ ಯಾವುದಾದರೂ ಯೋಜನೆಗಳನ್ನು ರೂಪಿಸಲು ಚಿಂತನೆ ನಡೆಸಿದೆಯೇ ;

(ಆ) ಹಾಗಿದ್ದಲ್ಲಿ, ರೈತಾಪಿ ವರ್ಗದ ಮಕ್ಕಳಿಗೆ ಉನ್ನತ ಶಿಕ್ಷಣ ಹಾಗೂ ಉದ್ಯೋಗದಲ್ಲಿ ಹೆಚ್ಚಿನ ಆದ್ಯತೆ ಕಲ್ಪಿಸಲು ಯಾವುದಾದರೂ ಚಿಂತನೆಗಳಿವೆಯೇ;

(ಇ) ರೈತರ ಕಲ್ಯಾಣಕ್ಕಾಗಿ ರಾಜ್ಯದಿಂದ ಹಾಗೂ ಕೇಂದ್ರದಿಂದ ಒದಗಿಸಲಾಗುತ್ತಿರುವ ಅನುದಾನ ಎಷ್ಟು ; (ವಿವರ ನೀಡುವುದು)

(ಈ) ಈ ಅನುದಾನವು ಸಮರ್ಪಕವಾಗಿ ಬಳಕೆಯಾಗುತ್ತಿದೆಯೇ ; ಇಲ್ಲದಿದ್ದಲ್ಲಿ, ಕಾರಣಗಳೇನು ?

**ವಿ. ಶ್ರೀಶ್**

ಕಾರ್ಯದರ್ಶಿ

ಕರ್ನಾಟಕ ವಿಧಾನ ಪರಿಷತ್ತು

ಸರ್ಕಾರಿ ಮುದ್ರಣಾಲಯ, ವಿಕಾಸಸೌಧ, ಬೆಂಗಳೂರು, ಪಿ7. ಕಾ.ಸೂ. 663, ಪ್ರತಿಗಳು 1500